ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು,
ಕುಮಟಾ.

ಸಿಸಿ ನಂ. 40/2023

| | | |
|---|---|---|
| ಹೆಸರು | - | ವಿದ್ಯಾ |
| ತಂದೆಯ ಹೆಸರು | - | ನಾಗೇಶ ಶೇಟ್ ವೈಪ್ ಆಪ್ ಗಣಪತಿ ನಾಗೇಶ ಶೆಟ್ಟಿ |
| ವಯಸ್ಸು | - | 35 ವರ್ಷ |
| ಉದ್ಯೋಗ | - | ನೌಕರಿ |
| ವಾಸ್ತವ್ಯ | - | ಮಕ್ಕಿಗದ್ದೆ, ಹೆಗಡೆ, ಕುಮಟಾ |

– ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರಡಿ ಆರೋಪಿಯ ಹೇಳಿಕೆ –

ಪ್ರಶ್ನೆ - 1 ಈ ಪ್ರಕರಣದಲ್ಲಿನ ಸಾಕ್ಷಿದಾರರ ಹೇಳಿಕೆಯನ್ನು ಓದಿ, ಹೇಳಿ, ಕೇಳಿ, ತಿಳಿದುಕೊಂಡಿದ್ದೀರಾ?

ಉತ್ತರ -

ಪ್ರಶ್ನೆ - 2 ಪಿ ಡಬ್ಲ್ಯೂ 1 - ಸಂತೋಷ ರಾಮಾ ಮುಕ್ರಿ, ಇವರು ತಮ್ಮ ಸಾಕ್ಷ್ಯದಲ್ಲಿ , ನೀವು ಹಾಗೂ ಗಣಪತಿ ನಾಗೇಶ ಶೆಟ್ಟಿ , ಗೌರಿ ನಾಗೇಶ ಶೆಟ್ಟಿ ಸೇರಿ ಅವರ ಸಹಕಾರಿಗೆ ಭೇಟಿ ನೀಡಿನೀವು ಅವರ ಸಹಕಾರಿಗೆ ಸಾಲದ ಅರ್ಜಿ ಸಲ್ಲಿಸಿ ರೂ. 2,50,000/- ಗಳನ್ನು ಸಾಲವಾಗಿ ನೀಡುವಂತೆ ಸಲ್ಲಿಸಿದ ಅರ್ಜಿಯನ್ನು ಅವರ ಸಹಕಾರಿಯವರು ಪರಿಶೀಲಿಸಿ ನಿಮಗೆ ಸಾಲದ ಖಾತೆ ನಂ. 1169 ನೇದರಂತೆ ಓವರಡ್ರಾಪ್ಟ ಸಾಲ ಎಂತಾ ರೂ. 2,50,000/- ಗಳನ್ನು ದಿಃ 30-03-2019 ರಂದು ನೀಡಿದಂತೆ ನೀವು ಅವರ ಸಹಕಾರಿಯಿಂದ ಸಾಲವಾಗಿ ಪಡೆದಿದ್ದು ಇರುತ್ತಿದ್ದು ಸದರ ಸಾಲ ಪಡೆಯುವ ಕಾಲಕ್ಕೆ ನೀವು ಹಾಗೂ ಗಣಪತಿ ನಾಗೇಶ ಶೆಟ್ಟಿ , ಗೌರಿ ನಾಗೇಶ ಶೆಟ್ಟಿ ಇವರು ಅವರ ಸಹಕಾರಿಗೆ ಸಾಲದ ಕರಾರು ಪತ್ರ , ವಚನಪತ್ರ ವಗೈರೇ ದಾಖಲೆಗಳನ್ನು ಬರೆಸಿಕೊಟ್ಟಿದ್ದು ಇರುತ್ತದೆ ಎಂದು ಹೇಳುತ್ತಾರೆ. ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ -

ಪ್ರಶ್ನೆ – 3 ಪಿ ಡಬ್ಲ್ಯೂ 1 – ಇವರು ಮುಂದುವರಿದು , ಸದರ ಸಾಲದ ರಖಂನ್ನು ನೀವು ಮಾತಿನಂತೆ ವ ದಾಖಲೆಗಳಂತೆ ವಸೂಲ ಕೊಡದೇ ಇದ್ದುದರಿಂದ ಸದರ ಸಾಲವು ಕಟಬಾಕೀಯಾಗಿದ್ದು , ಸದರ ಸಾಲದ ರಖಂನ್ನು ವಸೂಲ ನೀಡಲು ನೀವು ಹಾಗೂ ಜಾಮೀನುದಾರರು ಜವಾಬುದಾರರಿರುತ್ತಾರೆ ಎಂದು ಹೇಳುತ್ತಾರೆ. ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

ಪ್ರಶ್ನೆ – 4 ಪಿ ಡಬ್ಲ್ಯೂ 1 – ಇವರು ಮುಂದುವರಿದು , ಕಾರಣ ಸದರ ಸಾಲವು ಕಟಬಾಕೀಯಾಗಿದ್ದರಿಂದ ಸದರ ಸಾಲದ ರಖಂನ್ನು ವಸೂಲ ಕೊಡುವಂತೆ ಅವರು ಸಾಲಗಾರರನ್ನು ಹಾಗೂ ಜಾಮೀನುದಾರರನ್ನು ಭೇಟಿಯಾಗಿ ಸದರ ಸಾಲದ ರಖಂನ್ನು ಬಡ್ಡಿ ಸಹಿತ ಮರುಪಾವತಿ ಮಾಡುವಂತೆ ವಿನಂತಿಸಿಕೊಂಡಾಗ ನೀವು ಸದರ ಸಾಲದ ರಖಂನ್ನು ವಸೂಲ ಕೊಡುತ್ತೇನೆ ಆದರೆ ಸದರ ಸಾಲದ ರಖಂ ಪೈಕಿ ವಸೂಲ ನೀಡಲು ಈಗ ತನ್ನ ಹತ್ತಿರ ಕೈಯಲ್ಲಿ ನಗದಾಗಿ ಹಣವಿಲ್ಲಾ, ಆದ್ದರಿಂದ ನಿಮಗೆ ಚೆಕ್ ನ್ನು ಕೊಡುತ್ತೇನೆ , ನೀವು ಬ್ಯಾಂಕಿನಿಂದ ಹಣ ಪಡೆದುಕೊಳ್ಳಿರಿ ಅಂತಾ ಹೇಳಿ ನೀವು ನಿಮ್ಮ ಖಾತೆ ಇರುವ ಕೆನರಾ ಬ್ಯಾಂಕ ಶಾಖಾ ಚಂದಾವರ ಇದರ ಚೆಕ್ ನಂ. 319302 ರೂ.3,14,050/- ದಿಃ 09-11-2020 ನೇದನ್ನು ನೀಡಿದ್ದು ಇರುತ್ತದೆ ಎಂದು ಹೇಳುತ್ತಾರೆ. ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

ಪ್ರಶ್ನೆ – 5 ಪಿ ಡಬ್ಲ್ಯೂ 1 – ಇವರು ಮುಂದುವರಿದು , ನಿಮ್ಮ ಮಾತಿನ ಮೇರೆಗೆ ಸದರ ಚೆಕ್ ನ್ನು ವಠಾವಣೆ ಕುರಿತು ಅವರ ಬ್ಯಾಂಕರರಾದ ದಿ ಕೆ ಡಿ ಸಿ ಸಿ ಬ್ಯಾಂಕ ಶಾಖಾ ಕುಮಟಾ ಇದಕ್ಕೆ ಹಾಜರು ಪಡಿಸಿದಾಗ ಸದರ ಚೆಕ್ ಖಾತೆಯಲ್ಲಿ ಸಾಕಷ್ಟು ಹಣ ಜಮಾ ಇಲ್ಲ ಎಂಬ ಕಾರಣದಿಂದ ನಗದಾಗದೇ ಮರಳಿ ಬಂದಿದ್ದು ಇರುತ್ತದೆ ಎಂತಾ ದಿಃ 11-11-2020 ರಂದು ಬ್ಯಾಂಕರರು ತಿಳಿಸಿರುತ್ತಾರೆ ಎಂದು ಹೇಳುತ್ತಾರೆ. ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

<u>ಪ್ರಶ್ನೆ - 6</u> ಪಿಡಬ್ಲ್ಯೂ 1 - ಇವರು ಮುಂದುವರಿದು, ಕಾರಣ ಖಾತೆಯಲ್ಲಿ ಸಾಕಷ್ಟು ಹಣ ಜಮಾ ಇಲ್ಲದೇ ಚೆಕ್ ನೀಡುವುದು ಎನ್ ಆಯ್ ಎಕ್ಟ ರನ್ವಯ ದಂಡನೀಯ ಅಪರಾಧವಾಗಿರುತ್ತದೆ ಎಂದು ಹೇಳುತ್ತಾರೆ. ಅದಕ್ಕೆ ನೀವು ಏನು ಹೇಳುತ್ತೀರಿ?

<u>ಉತ್ತರ -</u>

<u>ಪ್ರಶ್ನೆ - 7</u> ಪಿಡಬ್ಲ್ಯೂ 1 - ಇವರು ಮುಂದುವರಿದು, ಕಾರಣ ನೀವು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಜಮಾ ಇಲ್ಲ ಎನ್ನುವುದು ಗೊತ್ತಿರುತ್ತಾ ತಿಳಿದೂ ತಿಳಿದೂ ಅವರ ಸಹಕಾರಿಗೆ ವಸೂಲ ಕೊಡತಕ್ಕ ರಖಂನ್ನು ಬುಧ್ಧ್ಯಾಪೂರ್ವಕವಾಗಿ ವಸೂಲ ಕೊಡದೇ ಮೋಸ ಪಡಿಸಬೇಕೆಂಬ ದುರುದ್ದೇಶದಿಂದ ಬೋಗಸ್ ಚೆಕ್ ನ್ನು ನೀಡಿ ಎನ್ ಆಯ್ ಎಕ್ಟರನ್ವಯ ಧಂಡನೀಯ ಶಿಕ್ಷಾರ್ಹ ಅಪರಾಧ ಎಸಗಿದ್ದು ಇರುತ್ತದೆ ಎಂದು ಹೇಳುತ್ತಾರೆ . ಅದಕ್ಕೆ ನೀವು ಏನು ಹೇಳುತ್ತೀರಿ?

<u>ಉತ್ತರ -</u>

<u>ಪ್ರಶ್ನೆ - 8</u> ಪಿಡಬ್ಲ್ಯೂ 1 - ಇವರು ಮುಂದುವರಿದು, ಹೀಗಿರುವಾಗ ಅವರು ಸದರ ಚೆಕ್ ಅಮಾನ್ಯಗೊಂಡ ಕುರಿತು ನಿಮಗೆ ಅವರ ವಕೀಲರ ಮೂಲಕ ದಿಃ 26-11-2020 ನೇ ನೋಟಿಸು ಕೊಡಿಸಿ ಸದರ ನೋಟಿಸು ಜ್ಯಾರಿಯಾದ 15 ದಿವಸದೊಳಗಾಗಿ ಸದರ ಚೆಕ್ ರಖಂನ್ನು ವಸೂಲ ನೀಡುವಂತೆ ಮಾಗಣೆ ಮಾಡಿ ಕಳಿಸಿದ ನೋಟಿಸು ನಿಮಗೆ ದಿಃ 27-11-2020 ರಂದು ಜಾರಿಯಾದಾಗ್ಯೂ ಸಹ ಸದರ ನೋಟಿಸಿಗೆ ನೀವು ಉತ್ತರ ನೀಡಿದ್ದಾಗಲೀ ಚೆಕ್ ರಖಂ ವಸೂಲ ನೀಡಿದ್ದಾಗಲೀ ಇರುವುದಿಲ್ಲಾ ಎಂದು ಹೇಳುತ್ತಾರೆ . ಅದಕ್ಕೆ ನೀವು ಏನು ಹೇಳುತ್ತೀರಿ?

<u>ಉತ್ತರ -</u>

ಪ್ರಶ್ನೆ – 9 ಈ ಪ್ರಕರಣದ ಬಗ್ಗೆ ನೀವು ಏನಾದರೂ ಹೇಳಲು ಇಚ್ಛಿಸುತ್ತೀರಾ?

ಉತ್ತರ –

ಪ್ರಶ್ನೆ – 10 ನಿಮ್ಮ ಪರ ರಕ್ಷಣಾ ಸಾಕ್ಷಿಯನ್ನು ವಿಚಾರಣೆ ಮಾಡುತ್ತೀರಾ?

ಉತ್ತರ –

ಆರೋಪಿಯ ಹೇಳಿಕೆಯನ್ನು ನನ್ನ ಸಮಕ್ಷಮ ಬಹಿರಂಗ ನ್ಯಾಯಾಲಯದಲ್ಲಿ ಪಡೆದುಕೊಳ್ಳಲಾಯಿತು. ಇದರಲ್ಲಿನ ಎಲ್ಲ ಅಂಶಗಳನ್ನು ಈ ಕಡತವು ಪೂರ್ಣವಾಗಿ ಒಳಗೊಂಡಿರುತ್ತದೆ.

ಸ್ಥಳಃ ಕುಮಟಾ
ದಿಃ 15–05–2026.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾ.ದಂ., ಕುಮಟಾ.